**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ
ಪ್ರಮಾಣ ವಚನ ಮಾಡಲಾದ ದಿ : 02.01.2023
ಮು. ಪಾಟಿ ಸವಾಲು : ಪ್ರತಿವಾದಿ-1 ಪರ ಶ್ರೀ ಎಂ.ಆರ್.ವಿ. ವಕೀಲರಿಂದ

ಅಳತೆ ಮಾಡಿಸುವ ಕಾಲದಲ್ಲಿ ಸರ್ವೆಯರ್ ರವರಿಗೆ ಆರ್.ಟಿ.ಸಿ ಹಾಜರುಪಡಿಸಿದ್ದೇನೆ. ಸರ್ವೆಯರ್ ರವರು ಮಾಡಿರುವ ಸ್ಕೆಚ್ ನಲ್ಲಿ ದಕ್ಷಿಣದ ದಿಕ್ಕಿಗೆ ಗಾಮನಹಳ್ಳಿ ರಸ್ತೆ ಎಂದು ನಮೂದು ಇಲ್ಲವೆಂದರೆ ಸರಿ. ಸ್ಕೆಚ್ ಬಗ್ಗೆ ನಾನು ಪರಿಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಸ್ಕೆಚ್ ನಲ್ಲಿ ದಕ್ಷಿಣದ ದಿಕ್ಕಿಗೆ ನನ್ನ ಭಾಗದ ಆಸ್ತಿ ಎಂದು ತೋರಿಸಿರುತ್ತಾರೆ.

ಸ್ಕೆಚ್ ಪ್ರಕಾರ ಪೂರ್ವ ದಿಕ್ಕಿಗೆ ಸಿದ್ದೇಗೌಡರ ಜಮೀನು, ಪಶ್ಚಿಮಕ್ಕೆ ಮಂಡ್ಯ ಬನ್ನೂರು ರಸ್ತೆ, ಉತ್ತರಕ್ಕೆ- ಚೆನ್ನ ಬಸಯ್ಯನವರ ಆಸ್ತಿ ಎಂದು ತೋರಿಸಲಾಗಿದೆ. ನ್ಯಾಯಾಲಯದ ಮುಖಾಂತರ ಸರ್ಕಾರಿ ಸರ್ವೆಯರ್ ರವರಿಂದ ಅಳತೆ ಮಾಡಿಸಲು ನನ್ನ ತಕರಾರು ಇಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ನಾನು ಆರ್.ಟಿ.ಸಿ, ಚೆಕ್ಕು ಬಂದಿಗೆ ಸಂಬಂಧಿಸಿದ ಸ್ಕೆಚ್ ಹಾಜರುಪಡಿಸಿದ್ದೇನೆ. ನಿಪಿ.8 ಮತ್ತು 9 ದಾಖಲೆಗಳು ಒಂದೇ ಆಸ್ತಿಗೆ ಸಂಬಂಧಿಸಿದ್ದು ಎಂದರೆ ಸರಿ. ದಾಖಲೆಗಳ ಪ್ರಕಾರ ಎ ಷೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ನನ್ನದೇ ಆಸ್ತಿ ಇದೆ ಎಂದರೆ ಸರಿ. ಬಿ ಷೆಡ್ಯೂಲ್ ಉತ್ತರ ದಿಕ್ಕಿಗೆ ನನ್ನದೇ ಆಸ್ತಿ ಇದೆ ಎಂದರೆ ಸರಿ.

ಎ ಷೆಡ್ಯೂಲ್ ಆಸ್ತಿಯ ಚೆಕ್ಕು ಬಂದಿ ಹೇಳಬಲ್ಲೆ. ಪೂರ್ವಃ ಸಿದ್ದೇಗೌಡ, ಪಶ್ಚಿಮಃ ಮಂಡ್ಯ-ಬನ್ನೂರು ರಸ್ತೆ, ದಕ್ಷಿಣಃ ಚೆನ್ನಬಸವಯ್ಯನವರ ಜಮೀನು, ಉತ್ತರಃ ಮೊದಲು ಬಾವಿ ಮತ್ತು ರಸ್ತೆ ಇತ್ತು ಈಗ ಬೇರೆಯವರು 6 ತಿಂಗಳುಗಳ ಹಿಂದೆ ಮನೆ ನಿರ್ಮಿಸಿದ್ದಾರೆ. ಬಿ ಷೆಡ್ಯೂಲ್ ಆಸ್ತಿಯ ಚೆಕ್ಕು ಬಂದಿ ಹೇಳಬಲ್ಲೆ. ಪೂರ್ವಃ ಮಲ್ಲಣ್ಣನವರ ಜಮೀನು, ಪಶ್ಚಿಮಃ ಚೆನ್ನಬಸವಯ್ಯನವರ ಜಮೀನು, ದಕ್ಷಿಣಃ ಜೆ.ಸಿದ್ದೇಗೌಡರ ಜಮೀನು, ಉತ್ತರಃ ಹೊಟ್ಟೆ ಬೋರೇಗೌಡರ ಜಮೀನು ಇರುತ್ತದೆ. ನಾನು ಹೇಳಿದ ಚೆಕ್ಕುಬಂದಿಯ ಸಂಬಂಧ ಸ್ಕೆಚ್ ಮಾಡಿಸಿಲ್ಲ ಎಂದರೆ ಸುಳ್ಳು.

ದಾವಾ ಹಾಕುವ ಕಾಲಕ್ಕೆ ದಾವಾಸ್ತಿ ಸುಮಾರು 5 ಲಕ್ಷ ಬೆಲೆ ಬಾಳುತ್ತಿತ್ತು. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತು ಸುಮಾರು 10 ಲಕ್ಷಕ್ಕೂ ಮೇಲ್ಪಟ್ಟು ಬೆಲೆ ಬಾಳುತ್ತಿತ್ತು ಎಂದರೆ ಸುಳ್ಳು.

ದಾವಾ ಹಾಕುವ ಪೂರ್ವದಲ್ಲಿ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಬೇಸ್ ಮೆಂಟ್ ಹಾಕಿದ್ದರು ಎಂದರೆ ಸುಳ್ಳು. ಈಗ ದಾವಾ ಸ್ವತ್ತಿನಲ್ಲಿ ಬೇಸ್ ಮೆಂಟ್ ಇದೆ ಎಂದರೆ ಸುಳ್ಳು. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಲಾಗಿ ಅದು ನನ್ನ ಭಾಗದ ಸ್ವತ್ತು ಎಂದು ತಿಳಿಸಿದ್ದು ಸದರಿ ಭಾವಚಿತ್ರಗಳನ್ನು ನಿಡಿ.1 ಮತ್ತು ನಿಡಿ.2 ಎಂದು ಗುರುತಿಸಲಾಯಿತು.

ನನ್ನ ಜಾಗಕ್ಕೆ ಸಂಬಂಧಿಸಿದಂತೆ ಪೂರ್ವ ದಿಕ್ಕಿನಲ್ಲಿ ಬೇಸ್ ಮೆಂಟ್ ಹಾಕಿರುತ್ತೇನೆ. ಸದರಿ ಬೇಸ್ ಮೆಂಟ್ ಹಾಕುವ ಸಂಬಂಧ ನಾನು ಪಂಚಾಯಿತಿಯಿಂದ ಲೈಸನ್ಸ ಪಡೆದಿದ್ದೇನೆ. ನಾನು ನನ್ನ ವಾದ ಪತ್ರದಲ್ಲಿ ಸದರಿ ಅಂಶವನ್ನು ತಿಳಿಸಿದ್ದೇನೆ. ನಾನು ಪಡೆದ ಲೈಸನ್ಸ ಅನ್ನು ನ್ಯಾಯಾಲಯಕ್ಕೆ ಪಡೆದಿದ್ದೇನೆ.

1 ನೇ ಪ್ರತಿವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ಬೋರೇಗೌಡ ಉರುಫ್ ಕರೀಗೌಡ ಹಾಗೂ ಹೊಟ್ಟೆ ಬೋರೇಗೌಡ ಎನ್ನುವವರ ಆಸ್ತಿ ಬರುತ್ತದೆ. ಸದರಿ ಜಾಗದಲ್ಲಿ ಓಡಾಡಲು ರಸ್ತೆ ಇದೆ ಎಂದರೆ ಸುಳ್ಳು. ನಿಪಿ.1 ಮತ್ತು ನಿಪಿ.2 ಆರ್.ಟಿ.ಸಿ ಗಳಲ್ಲಿನ ಕಾಲಂ.10 ರಲ್ಲಿ ತೋರಿಸಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ.

1 ನೇ ಪ್ರತಿವಾದಿ ತೊಂದರೆ ನೀಡುತ್ತಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮಗೆ ಸೇರಿದ ಆಸ್ತಿಯಲ್ಲಿ ಬೇಸ್ ಮೆಂಟ್ ಹಾಕಿದ್ದು ಅವರು ಕಟ್ಟಡ ಕಟ್ಟಲು ನಾನೇ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕಟ್ಟಡ ಕಟ್ಟುವ ಸಲುವಾಗಿ ಪರವಾನಿಗೆ ಪಡೆದಿದ್ದಾರೆ ಅದು ನನಗೆ ಗೊತ್ತಿದ್ದರೂ ಕೂಡ ಅವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.